1. ಕಾಂಗ್ರೆಸ್ ಮತ್ತು ಜೆಡಿ(ಎಸ್) ಸದಸ್ಯರಿಂದ ಧರಣಿ:

ಶ್ರೀ ಟಿ.ಬಿ.ಜಯಚಂದ್ರ: ಸಭಾಧ್ಯಕ್ಷರೆ, ತಮಗೆ ಆತ್ಮೀಯವಾದಂಥ ಸ್ವಾಗತ ಕೋರುತ್ತೇವೆ. ನಮಗೆ ಮಾತನಾಡಲಿಕ್ಕೆ ದಯಮಾಡಿ ಅವಕಾಶ ಕೊಡಿ.

(ಈ ಹಂತದಲ್ಲಿ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದರು.)

ಅಧ್ಯಕ್ಷರು: ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡಲಿಕ್ಕಾದರೂ ಅವಕಾಶ ಕೊಡಿ ಸ್ವಾಮಿ.

ಅಧ್ಯಕ್ಷರು: ಎಲ್ಲರೂ ಬಾವಿಯಿಂದ ಹೊರಗೆ ಹೋಗಿ, ನಾನು ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಈ ರೀತಿಯಾದರೆ ಸದನ ನಡೆಸಲಿಕ್ಕೆ ಆಗುವುದಿಲ್ಲ. ಇದು ಯಾವುದೂ ದಾಖಲೆಗೆ ಹೋಗಬಾರದು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)

ಅಧ್ಯಕ್ಷರು: ಈಗ ವರದಿಯನ್ನು ಒಪ್ಪಿಸುವುದು.

2. ವರದಿಯನ್ನೊಪ್ಪಿಸುವುದು:

ಶ್ರೀ ಎಂ.ಪಿ.ಅಪ್ಪಚ್ಚುರಂಜನ್(ಅಧ್ಯಕ್ಷರು, ಅರ್ಜಿಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ನಾನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ದಿನಗೂಲಿ ನೌಕರರಿಗೆ ಆರ್ಥಿಕ ಸವಲತ್ತು ಮತ್ತು ಸೇವಾ ಸೌಲಭ್ಯ ಕುರಿತು 2008–09ನೇ ಸಾಲಿನ ಅರ್ಜಿಗಳ ಸಮಿತಿಯ ಮೊದಲನೇ ವರದಿಯನ್ನೊಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಗಿದೆ,

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧಕ್ಷರೆ, ದಯಮಾಡಿ ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.